ಮೇಲೆ ಒಂದಾಗಿ ಬರುವ ಪತ್ನಿಯರು ಬಲಿಪಶುಗಳಾಗುವ ತೀಕ್ಷ್ಣ ಚಿತ್ರಣವನ್ನು ಇಕ್ಬಾಲುನ್ನೀಸಾ ನೀಡುತ್ತಾರೆ.

ಮಗ ಕಬೀರನಿಗೆ ಮದುವೆ ಮಾಡಲು ಹುಡುಗಿಯನ್ನು ತರಲು ಜುಹ್ರಾ ಹೊರಡುತ್ತಾಳೆ. ತನ್ನ ಇಡೀ ಬದುಕಿನಲ್ಲಿ ತನ್ನ ಆಸೆ, ನಿರ್ಣಯ, ಅಭಿಪ್ರಾಯಕ್ಕೆ ಎಂದೂ ಬೆಲೆ ಇಲ್ಲದಿದ್ದ ಜುಹ್ರಾಳಿಗೆ, ಮಗನಿಗೆ ಹೆಣ್ಣು ಹುಡುಕುವ ಅಧಿಕಾರ ಈಗ ಬಂದಿದೆ. ಶ್ರೀಮಂತ ಕುಟುಂಬದ ಅತ್ಯಂತ ರೂಪವತಿ ಹುಡುಗಿ ನಾಝ್ನಿಯನ್ನು ತರುತ್ತಾಳೆ. 'ಮುಸ್ಲಿಮ್ ಮದುವೆಗಳು ಲಾಟರಿ ಇದ್ದಂತೆ' ಎನ್ನುತ್ತಾರೆ ಇಕ್ಬಾಲುನ್ನೀಸಾ. ಕಾರಣ ಮದುವೆಯಾಗುವ ಹುಡುಗ, ಹುಡುಗಿಯನ್ನು ನೇರವಾಗಿ ನೋಡುವಂತಿಲ್ಲ, ಮಾತನಾಡುವಂತಿಲ್ಲ, ಅರಿಯುವಂತಿಲ್ಲ. ತಾಯಿ ವಿಧವೆಯಾದ ಕಾರಣ, ಹುಡುಗಿಯನ್ನು ಹೋಗಿ ನೋಡುವಂತಿಲ್ಲ. ಇಂತಹ ಕಟ್ಟಾ ಸಂಪ್ರದಾಯದಲ್ಲಿ ಸಿಕ್ಕಿಬಿದ್ದ ತಾಯಿ ಮತ್ತು ಮಗ, ನಡುವಿನ ಮೂರನೆಯವರ ಮಾತುಗಳನ್ನು ಕೇಳಿ ವಿವಾಹವಾಗಬೇಕು. ನಿಕಾ ಆಗಿ, 'ಜಲ್ವಾ'ದಲ್ಲಿಯೇ ಹುಡುಗ–ಹುಡುಗಿ ಪರಸ್ಪರರನ್ನು ನೋಡುವುದು.

ಮನೆಯಲ್ಲಿ ಆಳುಕಾಳುಗಳಿದ್ದು ಬೆಳೆದ ಹುಡುಗಿ ನಾಝ್ನಿ ಮನೆಗೆಲಸದಲ್ಲಿ ಗಟ್ಟಿಗಿತ್ತಿಯಲ್ಲ. ಈ ಸಿರಿವಂತರ ಮನೆಯ ಹುಡುಗಿ ತನಗೆ ಅಡಿಯಾಳಂತೂ ಆಗಳು ಎಂದು ಅರಿವಾದಾಗ ಜುಹ್ರಾಳ ಅಸಮಾಧಾನ ಕುದಿಯುತ್ತದೆ. ತಾನೇ ಆರಿಸಿ ತಂದ ನಾಝ್ನಿಯೊಡನೆ ಮಗ ಪ್ರೀತಿಯಿಂದ ಇರುವುದೂ ಅವಳಿಗೆ ಸಹಿಸಲಾಗದು. ಮಗನನ್ನು ತನ್ನ ನಿಯಂತ್ರಣದಲ್ಲಿ ಹಿಡಿದಿಟ್ಟುಕೊಳ್ಳುವ ಸ್ವಾರ್ಥದಲ್ಲಿ ಅವನ ಸಂಸಾರವನ್ನು ಒಡೆಯಲೂ ಆಕೆ ಹೇಸುವುದಿಲ್ಲ. ಪ್ರಗತಿಪರನಾದ ನಾಝ್ನಿಯ ತಂದೆ, ಮಗಳನ್ನೂ ಅಳಿಯನನ್ನೂ ಸಿನಿಮಾಗೆ ಕರೆದುಕೊಂಡು ಹೋಗುವುದೇ ಮಹಾಪರಾಧ ಎಂದು ಬಿಂಬಿಸುತ್ತಾಳೆ. ತನ್ನ ಮೇಲೆ ಗಂಡ ಹೇರಿದ್ದ ಸಂಪ್ರದಾಯವನ್ನು ಅಂತರ್ಗತವಾಗಿಸಿಕೊಂಡ, ವಿವೇಚನೆ ಇಲ್ಲದ ಜುಹ್ರಾ, ತಾನು ಕಳೆದುಕೊಂಡ ಖುಷಿಯನ್ನು, ತನ್ನ ಸೊಸೆಗೂ ಅನುಭವಿಸಲು ಬಿಡಳು. ಹೆರಿಗೆಗೆ ತವರಿಗೆ ಹೋದ ನಾಝ್ನಿ, ಅನಾರೋಗ್ಯದಿಂದ ಹೆಚ್ಚು ದಿನ ಉಳಿಯಬೇಕಾದಾಗ, ಮಗನಿಗೆ ಮತ್ತೆ ಮದುವೆಯಾಗುವಂತೆ ಪ್ರೋತ್ಸಾಹಿಸುತ್ತಾಳೆ. ಮೊದಲೇ ದುರ್ಬಲ ವ್ಯಕ್ತಿತ್ವದ, ತನ್ನ ಸ್ವಂತಸುಖವೊಂದನ್ನೇ ಕೇಂದ್ರಿಕರಿಸಿದ ಕಬೀರನಿಗೂ ಎರಡನೇ ಮದುವೆ ಬೇಕಾಗಿರುತ್ತದೆ.

ಈ ಬಾರಿ ತಾಯಿ, ತನಗೆ ವಿಧೇಯಳಾಗಿದ್ದು, ಮನೆಯ ಎಲ್ಲ ಚಾಕರಿ ಮಾಡಬಲ್ಲ ಗಟ್ಟಿಗಿತ್ತಿ ಮುನೀರಾಳನ್ನು ತಂದೆ ಇಲ್ಲದ ಬಡ ಕುಟುಂಬದಿಂದ ತರುತ್ತಾಳೆ. ಆದರೆ, 'ಜಲ್ವಾ'ದ ದಿನ ಕಪ್ಪು ಬಣ್ಣದ ಉಬ್ಬು ಹಲ್ಲಿನ ಮುನೀರಾಳನ್ನು ನೋಡಿದವನೇ ಕಬೀರ್ ಕೋಪಗೊಂಡು ಆಕೆಯನ್ನು ನಿರಾಕರಿಸಿ ಹೊರ ನಡೆದು ಬಿಡುತ್ತಾನೆ. ಓದು, ಉದ್ಯೋಗ, ಹೊರಜಗತ್ತಿಗೆ ಪ್ರವೇಶದ ಅವಕಾಶವೇ ಇಲ್ಲದ ಹೆಣ್ಣುಮಕ್ಕಳಿಗೆ ಮದುವೆ ಅನಿವಾರ್ಯವಾಗುತ್ತದೆ. ಆ ಮನೆಯಲ್ಲಿ ಸಂಬಳವಿಲ್ಲದೆ ಕೆಲಸದಾಳಿನಂತೆ, ಎಲ್ಲರ ಮರ್ಜಿಗೆ ತಕ್ಕಂತೆ, ದೂರಿಲ್ಲದೆ ಮುನೀರಾ ದುಡಿಯುತ್ತಾಳೆ.

ಈ ಬಾರಿ ತನಗೆ ತಕ್ಕ ಹೆಣ್ಣನ್ನು ತಾನೇ ತರಬೇಕು ಎಂದು ಹೊರಟ ಕಬೀರ್, ಸೌಂದರ್ಯದ ಖನಿಯಾದ ಮಕ್ಬೂಲ್‌ಳನ್ನು ವಿವಾಹವಾಗುತ್ತಾನೆ. ಕವಿತೆ ಬರೆಯಬಲ್ಲ, ಸ್ವತಃ ಯೋಚಿಸಬಲ್ಲ ಜಾಣೆ ಮಕ್ಬೂಲ್‌ಗೆ ಆ ಕಾಲಕ್ಕೆ ಬಲು ದೊಡ್ಡ ವಯಸ್ಸು 20 ಆಗಿಬಿಟ್ಟಿತ್ತು. ಹಾಗೆಂದೇ, ತನಗೆ ಯಾವ ರೀತಿಯಲ್ಲೂ ಈಡುಜೋಡಲ್ಲದ ಕಬೀರನ ಮೂರನೆ ಪತ್ನಿಯಾಗಿ ಆ ಮನೆಗೆ ಬರುತ್ತಾಳೆ. ಆದರೆ, ಮಗಳ ಭವಿಷ್ಯದ ಚಿಂತೆ ಇದ್ದ ತಂದೆ, ಕಬೀರನಿಂದ ಒಂದು ಮನೆಯನ್ನು ಮದುವೆಗೆ ಮೊದಲೇ ಮಗಳ ಹೆಸರಿಗೆ ಬರೆಸಿಕೊಂಡು, ಅವಳಿಗೆ ಬಾಡಿಗೆಯ ಹಣ ಬರುವಂತೆ ಎಚ್ಚರ ವಹಿಸುತ್ತಾನೆ. ಒಟ್ಟಿನಲ್ಲಿ ಮದುವೆಯೊಂದು ಕರಾರು. ತನಗೆ ಹೇಳದೆಯೇ ಮದುವೆಯಾಗಿ ಕರೆತಂದ ಮಕ್ಬೂಲ್‌ಳ ಬಗ್ಗೆ ಜುಹ್ರಾ ಬೆಂಕಿ ಕಾರುತ್ತಾಳೆ. ಮಕ್ಬೂಲ್ ತನ್ನ ತವರಿನಲ್ಲಿ ಓದಿ ಬೆಳೆದ ಎಳೆಯ